# ಕುಗ್ರಾಮ ಅಲ್ಲ ಕಲಾಗ್ರಾಮ!



ಒಡಿಶಾ ರಾಜ್ಯದ ಪುರಿಯಿಂದ ಕೇವಲ ಹತ್ತು ಕಿಲೋ ಮೀಟರ್ ದೂರದಲ್ಲಿರುವ ಕೇವಲ 150 ಮನೆಗಳ ಕುಗ್ರಾಮ ಇದೀಗ 'ಕಲಾಗ್ರಾಮ' ಎನಿಸಿದೆ. ಇಲ್ಲಿ ವಾಸಿಸುತ್ತಿರುವ ಎಲ್ಲ ಮನೆಗಳಲ್ಲೂ ಕಲಾವಿದರೇ ತುಂಬಿದ್ದು, ವೈವಿಧ್ಯಮಯ ಕಲೆಯನ್ನೇ ಕಾಯಕ ಮಾಡಿಕೊಂಡಿದ್ದಾರೆ.

■ ದಂಡಿನಶಿವರ ಮಂಜುನಾಥ್

ಈ ಊರಿನ ಮನೆಗಳ ಗೋಡೆ ಮೇಲೆ ಬಣ್ಣ ಬಣ್ಣದ ಚಿತ್ತಾರ! ಅದ್ಭುತ ಕಲಾಕೃತಿಗಳು ನೋಡುಗರನ್ನು ಸೆಳೆಯುತ್ತವೆ. ಈ ಗ್ರಾಮದ ತುಂಬೆಲ್ಲಾ ವಿವಿಧ ಕಲಾವಿದರ ದಂಡೇ ಕಂಡು ಬರುತ್ತದೆ. ಪ್ರತಿ ಮನೆಗಳ ಗೋಡೆಗಳು ಮಹಾಭಾರತ ಮತ್ತು ರಾಮಾಯಣದ ಕಥೆಗಳನ್ನು ಚಿತ್ರಗಳ ಮೂಲಕ ಸಾರಿ ಹೇಳುತ್ತವೆ!

ಹೌದು. ಖಂಡಿತಾ ನಿಮಗೆ ಅಚ್ಚರಿಯಾಗುತ್ತದೆ. ಇಂತಹ ಕಲಾತ್ಮಕ ಮನೆಗಳನ್ನು ಒಡಿಶಾ ರಾಜ್ಯದ ಪುರಿಯಿಂದ ಕೇವಲ ಹತ್ತು ಕಿಲೋ ಮೀಟರ್ ದೂರದಲ್ಲಿರುವ ರಘುರಾಜಪುರದಲ್ಲಿ ನೋಡಬಹುದು. ಇದು ಕುಗ್ರಾಮವಾದರೂ ಸಹ ಕಲಾ ಗ್ರಾಮವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಈ ಊರಿನಲ್ಲಿ ಸುಮಾರು 120 ಮನೆಗಳಿವೆ. ಎಲ್ಲಾ ಮನೆಗಳ ಹೊರ ಒಳಗೂ ಸಹ ಸುಂದರ ಕೈಬರಹದ ಚಿತ್ರಕಲೆಗಳು ಎಲ್ಲರ ಗಮನ ಸೆಳೆಯುತ್ತವೆ. ಎಲ್ಲಾ ಮನೆಗಳಲ್ಲಿಯೂ ಚಿತ್ರಗಳು ರೂಪುಗೊಳ್ಳುತ್ತಿರುತ್ತವೆ. 'ಪಟ ಚಿತ್ರ' ಇಲ್ಲಿನ ಪ್ರಮುಖ ಕಲೆಯಾಗಿದೆ.



### ಪ್ರತಿಯೊಬ್ಬರೂ ಚಿತ್ರಕಲಾವಿದರು!

ಇಲ್ಲಿರುವ ನೂರಕ್ಕೂ ಹೆಚ್ಚು ಕುಟುಂಬದವರು ಹಳ್ಳಿಯ ಎರಡು ಬೀದಿಗಳಲ್ಲಿರುವ ಮನೆಗಳನ್ನೇ ತಮ್ಮ ಚಿತ್ರಕಲೆಯನ್ನು ಪ್ರದರ್ಶಿಸುವ ಅಂಗಡಿಯನ್ನಾಗಿ ಪರಿವರ್ತಿಸಿಕೊಂಡಿರುವುದು ಇಲ್ಲಿನ ವಿಶೇಷ ಸಂಗತಿ. ಊರಿನ ಗಂಡಸರು, ಮಹಿಳೆಯರು ಮತ್ತು ಮಕ್ಕಳೂ ಸಹ ಚಿತ್ರಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಇವರು ಕಾಗದ, ಮನೆಯ ಗೋಡೆ, ಮರ, ಕೊಬ್ಬರಿ, ಇಸ್ಪೀಟ್ ಎಲೆ, ಖಾಲಿ ಶೀಶ, ಮರದ ಎಲೆ, ಬಟ್ಟೆ... ಹೀಗೆ ಸಿಕ್ಕ ಸಿಕ್ಕ ವಸ್ತುಗಳ ಮೇಲೆಲ್ಲಾ ತಮ್ಮ ಕಲೆಯನ್ನು ಅರಳಿಸಿದ್ದಾರೆ. ಹೀಗಾಗಿ ಇಲ್ಲಿ ಪ್ರತಿಯೊಬ್ಬರೂ ಚಿತ್ರಕಲಾವಿದರು. ಪ್ರತಿ ಮನೆಗಳೂ ಸಹ ಚಿತ್ರಪಟಗಳ ಗ್ಯಾಲರಿಯಾಗಿ ಕಂಗೊಳಿಸುತ್ತವೆ.

2000 ದಲ್ಲಿ ಈ ಹಳ್ಳಿಯನ್ನು ಗುರುತಿಸಿದ ಸರ್ಕಾರ ಇದನ್ನು ದೇಶದ ಮೊದಲ 'ಪಾರಂಪರಿಕ ಹಳ್ಳಿ' ಎಂದು ಕರೆದು ಇದನ್ನು ಕಲಾಗ್ರಾಮವನ್ನಾಗಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಿದೆ. ಇದರಲ್ಲಿ ಯಶವನ್ನೂ ಕಂಡಿದೆ.

ಹಲವು ವರ್ಷಗಳ ಹಿಂದೆ ತುಂಬಾ ಸಂಕಷ್ಟದ ಸಮಯದಲ್ಲಿ ಇಲ್ಲಿನ ಜನರೆಲ್ಲಾ ಕಲೆಯನ್ನು ಕೈ ಬಿಟ್ಟು ವ್ಯವಸಾಯ ಮಾಡಲು ನಿರ್ಧರಿಸಿ, ಸ್ವಲ್ಪ ಕಾಲ ಕೃಷಿ ಮಾಡಿದರು. ಇದರಿಂದ ಅವರಿಗೆ ಖುಷಿ ಸಿಗಲಿಲ್ಲ. ಹಾಗಾಗಿ ಮತ್ತೆ ಕಲೆಯನ್ನೇ ಕೈಹಿಡಿದರು.

ರಘುರಾಜಪುರ ಪುರಿ ಜಿಲ್ಲೆಯ ಒಂದು ಸಣ್ಣ ಹಳ್ಳಿಯಾದರೂ ಸಹ ಅಲ್ಲಿನ ಕಲೆಯಿಂದಾಗಿ ಇಂದು ದೇಶದಲ್ಲಿಯೇ ಪ್ರಸಿದ್ಧಿ ಪಡೆದಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ■




ಸಂಧಿಲಿನ್
SANDHILIN सन्धिलिन
- ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
- ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.